# ಶುಗರ್ ಫ್ಯಾಕ್ಟರಿಯ ಸಿಹಿ ಹುಡುಗಿ!

**ಚಂದನವನದ ಹೊಸಮುಖಗಳಲ್ಲಿ 'ಶುಗರ್‌ಫ್ಯಾಕ್ಟರಿ' ಸಿನಿಮಾದ ಶಿಲ್ಪಾ ಶೆಟ್ಟಿ ಕೂಡ ಒಬ್ಬರು. ನಟನೆಯನ್ನು ಬದುಕು ಎಂದೇ ಪರಿಗಣಿಸಿರುವ ಅವರು, ಚಿತ್ರರಂಗದಲ್ಲಿಯೇ ಬದುಕಿನ ದಾರಿಗಳನ್ನು ಹುಡುಕಿಕೊಳ್ಳುತ್ತಿದ್ದಾರೆ.**

■ ಪದ್ಮನಾಭ ಭಟ್



ಪಟಪಟ ಮಾತು, ಕಿಂಚಿತ್ ಗೊಂದಲವಿಲ್ಲದ ಸ್ಪಷ್ಟತೆ, ಆತ್ಮವಿಶ್ವಾಸ ಇವು ಶಿಲ್ಪಾ ಶೆಟ್ಟಿ ಅವರನ್ನು ಮೊದಲಬಾರಿ ಮಾತಾಡಿಸಿದವರಿಗೆ ಎದ್ದು ಕಾಣುವುದು ಈ ಮೂರು ಗುಣಗಳು. ಹಾ, ಇಲ್ಲಿ ಪ್ರಸ್ತಾಪವಾಗುತ್ತಿರುವುದು ಬಾಲಿವುಡ್ ಬೆಡಗಿ ಶಿಲ್ಪಾ ಶೆಟ್ಟಿ ಬಗ್ಗೆಯಲ್ಲ. ಕನ್ನಡದ ಶುಗರ್ ಫ್ಯಾಕ್ಟರಿ ಹುಡುಗಿ ಶಿಲ್ಪಾ ಶೆಟ್ಟಿ ಬಗ್ಗೆ. ಈ ಇಬ್ಬರ ನಡುವೆ ಒಂದು ಸಾಮ್ಯತೆಯೂ ಇದೆ. ಅದು ಕರಾವಳಿ. ಇಬ್ಬರೂ ಕರಾವಳಿ ಮೂಲದವರು.

ಶಿಲ್ಪಾ ಅವರ ಹುಟ್ಟೂರು ಪುತ್ತೂರು. ಓದಿದ್ದೆಲ್ಲ ಪುತ್ತೂರು, ಮಂಗಳೂರು. ಎಂಜಿನಿಯರಿಂಗ್ ಮುಗಿಸಿದ ಇವರು ಬೆಂಗಳೂರಿಗೆ ಬಂದಿದ್ದು 2016ನಲ್ಲಿ. ಹೈಸ್ಕೂಲು ದಿನಗಳಲ್ಲಿಯೇ ಹಾಡು, ನೃತ್ಯ, ನಾಟಕ ಏನೇ ಇದ್ದರೂ ಅದರಲ್ಲಿ ಶಿಲ್ಪಾ ಹೆಸರು ಇದ್ದೇ ಇರುತ್ತಿತ್ತು. ನಾಟಕದ ಗುಂಗೇ ಕೊನೆಗೆ ಸಿನಿಮಾ ಕಡೆಗೆ ಕಣ್ಣು ಹೊರಳಿಸಲು ಕಾರಣವಾಯ್ತು. ಕಾಲೇಜು ಮೆಟ್ಟಿಲು ಹತ್ತುವಷ್ಟರಲ್ಲಿ ಅವರ ಮುಂದಿನ ದಾರಿ ಸ್ಪಷ್ಟವಾಗಿತ್ತು. 'ನಾನು ಎಂಜಿನಿಯರಿಂಗ್ ಓದಿದರೂ ಜಾಬ್ ಮಾಡುವವಳಲ್ಲ. ನಟನೆಯಲ್ಲಿಯೇ ಬದುಕು ಕಟ್ಟಿಕೊಳ್ಳುವವಳು' ಎಂದು ಸ್ಪಷ್ಟವಾಗಿ ಮನೆಯಲ್ಲಿ ಹೇಳಿಯೇ ಅವರು ಎಂಜಿನಿಯರಿಂಗ್ ಕಾಲೇಜಿನೊಳಗೆ ಅಡಿಯಿಟ್ಟಿದ್ದು.

ಎಂಜಿನಿಯರಿಂಗ್ ಮುಗಿಸಿ ಬೆಂಗಳೂರಿಗೆ ಬಂದು ಆಡಿಷನ್ ಕೊಡಲು ಶುರುಮಾಡಿದ ಅವರು ಮೊದಲು ಆಯ್ಕೆಯಾಗಿದ್ದು, ಸುವರ್ಣ ವಾಹಿನಿಯ 'ಎರಡು ಕನಸು' ಧಾರಾವಾಹಿಗೆ. ಅಲ್ಲಿಂದ ಅವರ ಕ್ಯಾಮೆರಾ ಎದುರಿನ ಜೀವನ ಶುರುವಾಯ್ತು.

ನಂತರ ಕಲರ್ಸ್ ಸೂಪರ್‌ನಲ್ಲಿ 'ರಾಜ ರಾಣಿ' ಧಾರಾವಾಹಿಯಲ್ಲಿಯೂ ನಟಿಸಿದರು. 2018ರಲ್ಲಿ ಅವರು ತುಳು ಸಿನಿಮಾ 'ಗಿರ್ ಗಿಟ್' ಮೂಲಕ ಬೆಳ್ಳಿಪರದೆಗೆ ಎಂಟ್ರಿ ಕೊಟ್ಟರು. ಆ ಸಿನಿಮಾ ಕರಾವಳಿಯ ಚಿತ್ರಮಂದಿರಗಳಲ್ಲಿ 250 ದಿನ ಓಡಿತು. ಬೆಂಗಳೂರಿನಲ್ಲಿಯೂ ಬಿಡುಗಡೆಯಾಗಿ ಜನಮೆಚ್ಚುಗೆ ಗಳಿಸಿತು. ನಂತರ 'ನ್ಯೂರಾನ್' ಎಂಬ ಸೈನ್ಸ್ ಫಿಕ್ಷನ್ ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಅಡಿಯಿಟ್ಟರು. ಹೊಸಬರ ತಂಡವೇ ಕಟ್ಟಿದ್ದ ಆ ಸಿನಿಮಾ ಅಷ್ಟೊಂದು ಸದ್ದು ಮಾಡಲಿಲ್ಲ. ರಮೇಶ್ ಅರವಿಂದ್ ಅವರ '100' ಸಿನಿಮಾದಲ್ಲಿಯೂ ಅವರು ಗೆಸ್ಟ್ ರೋಲ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಈಗ ಶಿಲ್ಪಾ 'ಶುಗರ್ ಫ್ಯಾಕ್ಟರಿ' ಸಿನಿಮಾದ ಕೆಲಸದಲ್ಲಿ ಬ್ಯುಸಿಯಾಗಿದ್ದಾರೆ. 'ಶುಗರ್ ಫ್ಯಾಕ್ಟರಿ ಒಂದು ಭಿನ್ನ ಸಿನಿಮಾ. ಡಾರ್ಲಿಂಗ್ ಕೃಷ್ಣ ಅವರ ವೃತ್ತಿಬದುಕಿನಲ್ಲಿಯೂ ಇದೊಂದು ಮೈಲಿಗಲ್ಲಾಗುವುದರಲ್ಲಿ ಸಂಶಯವಿಲ್ಲ. ಈ ವರ್ಷದ ವಿಭಿನ್ನ ಚಿತ್ರಗಳಲ್ಲಿ ಖಂಡಿತ ಈ ಸಿನಿಮಾವೂ ಒಂದಾಗಿರುತ್ತದೆ' ಎಂದು ಹೇಳುವ ಅವರು ತಮ್ಮ ಪಾತ್ರದ ಬಗ್ಗೆ ಮಾತ್ರ ತುಟಿಕ್ ಪಿಟಿಕ್ ಅನ್ನುವುದಿಲ್ಲ.

'ಸಿನಿಮಾದಲ್ಲಿ, ಸೀರಿಯಲ್‌ನಲ್ಲಿ ಒಮ್ಮೆ ತಪ್ಪಾದರೆ ರೀಟೇಕ್ ಮಾಡಬಹುದು. ಆದರೆ ರಂಗಭೂಮಿಯಲ್ಲಿ ಹಾಗಲ್ಲ, ಪ್ರೇಕ್ಷಕರು ಎದುರಿಗೆ ಕೂತಿರುತ್ತಾರೆ. ಒಮ್ಮೆ ತಪ್ಪಿದರೆ ಮುಗಿದುಹೋಯ್ತು. ಅದನ್ನು ಸರಿಪಡಿಸಲು ಸಾಧ್ಯವೇ ಇಲ್ಲ. ಧಾರಾವಾಹಿಗಳಲ್ಲಿ ವರ್ಷಾನುಗಟ್ಟಲೆ ಬರುತ್ತಿರುವುದರಿಂದ ಇಂದು ಸರಿಯಾಗಿ ನಟಿಸಲು ಸಾಧ್ಯವಾಗಲಿಲ್ಲ ಎಂದರೆ ನಾಳೆ ನಟಿಸಬಹುದು. ಆದರೆ ಸಿನಿಮಾದಲ್ಲಿ ಹಾಗಲ್ಲ, ಎರಡೂವರೆ ಗಂಟೆಯಲ್ಲಿಯೇ ನಮ್ಮೆಲ್ಲ ಪ್ರತಿಭೆಯನ್ನು ತೋರಿಸಿಬಿಡಬೇಕಾಗುತ್ತದೆ. ಹಾಗಾಗಿ ಅದು ಹೆಚ್ಚು ಸವಾಲಿನ ಕೆಲಸ' ಎನ್ನುವ ಶಿಲ್ಪಾ, 'ಸೀರಿಯಲ್‌ನಲ್ಲಿ ನಟಿಸುವವವರಿಗೆ ಚಿತ್ರರಂಗದಲ್ಲಿ ಅವಕಾಶಗಳು ಸಿಗುವುದು ಕಷ್ಟ' ಎಂದು ತುಸು ಬೇಸರದಿಂದಲೇ ಹೇಳುತ್ತಾರೆ. ಇದೇ ಕಾರಣಕ್ಕೆ ಅವರು ಕಳೆದ ಒಂದು ವರ್ಷದಿಂದ ಹಲವು ಅವಕಾಶಗಳು ಬರುತ್ತಿದ್ದರೂ ಧಾರಾವಾಹಿ ನಟನೆಯಿಂದ ದೂರವೇ ಉಳಿದಿದ್ದಾರೆ.

'ನಟನೆ ಎಂದರೆ ಬದುಕು ಅಷ್ಟೆ' ಎಂದು ಬದುಕನ್ನೂ ನಟನೆಯನ್ನೂ ಬೆಸೆದೇ ನೋಡುವ ಶಿಲ್ಪಾ ನಟಿಯಾಗಿಯೇ ಬದುಕನ್ನೂ ಕಟ್ಟಿಕೊಳ್ಳುವ ಕನಸನ್ನು ಇಟ್ಟುಕೊಂಡಿದ್ದಾರೆ. ■